REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 28 । ಅಕ್ಟೋಬರ್ 20, 2021 । ಬುಧವಾರ । ಪುಟಗಳು : 8 । ಬೆಲೆ : 2/-

## ತೆರಿಗೆದಾರರಿಗೆ ರೂ. 84,780 ಕೋಟಿ ಮರುಪಾವತಿಸಿದ ಸಿಬಿಡಿಟಿ : 2021ರ ಏಪ್ರಿಲ್ 1 ರಿಂದ 2021ರ ಅಕ್ಟೋಬರ್ 11ರವರೆಗಿನ ಅವಧಿಗೆ ತೆರಿಗೆ ಮರುಪಾವತಿ

**ಹೊಸದಿಲ್ಲಿ :** ಕೇಂದ್ರೀಯ ನೇರ ತೆರಿಗೆಗಳ ಮಂಡಳಿ (CBDT) ಸುಮಾರು 59.51 ಲಕ್ಷ ತೆರಿಗೆದಾರರಿಗೆ ಒಟ್ಟು 84,780 ಕೋಟಿ ರೂಪಾಯಿಯಷ್ಟು ಮರುಪಾವತಿ ಮಾಡಿದೆ ಎಂದು ಭಾರತೀಯ ಆದಾಯ ತೆರಿಗೆ ಇಲಾಖೆ ಟ್ವೀಟ್ ಮಾಡಿದೆ. 2021ರ ಏಪ್ರಿಲ್ 1 ರಿಂದ 2021ರ ಅಕ್ಟೋಬರ್ 11ರವರೆಗಿನ ಅವಧಿಗೆ ತೆರಿಗೆ ಮರುಪಾವತಿ (ಟ್ಯಾಕ್ಸ್ ರಿಟರ್ನ್ಸ್)ಗಳನ್ನು ನೀಡಲಾಗಿದೆ.




ಆದಾಯ ತೆರಿಗೆ ಮರುಪಾವತಿಯ ಮೊತ್ತ ರೂ. 22,214 ಕೋಟಿ ಮತ್ತು ಕಾರ್ಪೊರೇಟ್ ತೆರಿಗೆ ಮರುಪಾವತಿ ಮೌಲ್ಯ 62,567 ಕೋಟಿ ರೂಪಾಯಿಯಷ್ಟಿದೆ ಎಂದು ಆದಾಯ ತೆರಿಗೆ ಇಲಾಖೆ ವರದಿಯಲ್ಲಿ ತಿಳಿಸಿದೆ.

ಸಿಬಿಡಿಟಿ 2021ರ ಏಪ್ರಿಲ್ 1 ರಿಂದ 2021ರ ಅಕ್ಟೋಬರ್ 11 ರವರೆಗೆ 59.51 ಲಕ್ಷಕ್ಕೂ ಹೆಚ್ಚು ತೆರಿಗೆದಾರರಿಗೆ 84,781 ಕೋಟಿ ರೂಪಾಯಿಗಳ ಮರುಪಾವತಿ ಮಾಡಲಿದೆ. ಒಟ್ಟು 57,83,032 ಪ್ರಕರಣಗಳಡಿ 22,214 ಕೋಟಿ ರೂಪಾಯಿಯಷ್ಟು ಆದಾಯ ತೆರಿಗೆ ಮರುಪಾವತಿ ಮಾಡಲಾಗಿದೆ. ಮತ್ತು 1,67,718 ಪ್ರಕರಣಗಳಡಿ 62,567 ಕೋಟಿ ರೂಪಾಯಿಯಷ್ಟು ಕಾರ್ಪೊರೇಟ್ ತೆರಿಗೆ ಮರುಪಾವತಿ ಮಾಡಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಟ್ವೀಟ್ ಮಾಡಿದೆ.

ಆದಾಯ ತೆರಿಗೆ ಇಲಾಖೆ ವಿವರಗಳ ಪ್ರಕಾರ, 2021-22ರಲ್ಲಿ 29.23 ಲಕ್ಷ ಮರುಪಾವತಿ ಪ್ರಕರಣಗಳಡಿ 2,241.39 ಕೋಟಿ ರೂ. ನೀಡಲಾಗಿದೆ. ಆದಾಯ ತೆರಿಗೆ ಮರುಪಾವತಿ ಸ್ಥಿತಿ ನೇರ ಲಿಂಕ್ ಪರಿಶೀಲಿಸಿ

### ಆದಾಯ ತೆರಿಗೆ ಮರುಪಾವತಿ ಸ್ಟೇಟಸ್ ಚೆಕ್ ಹೇಗೆ?

ಆದಾಯ ತೆರಿಗೆ ಮರುಪಾವತಿ ಸ್ಟೇಟಸ್ ಚೆಕ್ ಮಾಡಲು https://tin.tin.nsdl.com/oltas/refund-status-pan.htmlಈ ಲಿಂಕ್‌ಗೆ ಭೇಟಿ ನೀಡಬೇಕು. ಈ ವೆಬ್ ಪುಟಕ್ಕೆ ಭೇಟಿ ನೀಡಿದ ನಂತರ 'ಮರುಪಾವತಿ ಟ್ರ್ಯಾಕಿಂಗ್' ವಿಭಾಗಕ್ಕೆ ಹೋಗಬೇಕು. ನೀವು ಶಾಶ್ವತ ಖಾತೆ ಸಂಖ್ಯೆ (PAN) ಮತ್ತು ಮೌಲ್ಯಮಾಪನ ವರ್ಷದಂತಹ ವಿವರಗಳನ್ನು ನಮೂದಿಸಬೇಕಾಗುತ್ತದೆ. ಕ್ಯಾಪ್ಚಾವನ್ನು ನಮೂದಿಸಿದ ನಂತರ, ನೀವು 'ಮುಂದುವರಿಯಿರಿ' ಮೇಲೆ ಕ್ಲಿಕ್ ಮಾಡಬಹುದು. RTGS/ NECS ಮತ್ತು ಪೇಪರ್ ಚೆಕ್ ಎಂಬ ಎರಡು ವಿಧಾನಗಳಲ್ಲಿ ಆದಾಯ ತೆರಿಗೆ ಮರುಪಾವತಿಯನ್ನು ಕಳುಹಿಸಲಾಗುತ್ತದೆ. RTGS ಅಥವಾ NECS ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಯ ಕ್ರೆಡಿಟ್ ಅನ್ನು ಸಕ್ರಿಯಗೊಳಿಸುತ್ತದೆ. ತೆರಿಗೆದಾರರ ಬ್ಯಾಂಕ್ ಖಾತೆ ಸಂಖ್ಯೆ, MICR ಕೋಡ್ ಅಥವಾ ಬ್ಯಾಂಕ್ ಶಾಖೆಯ IFSC ಕೋಡ್ ಮತ್ತು ಸರಿಯಾದ ಸಂವಹನ ವಿಳಾಸ ಕಡ್ಡಾಯ.

## ಉತ್ತಮ ಲಸಿಕೆ ಪ್ರಮಾಣ ಭಾರತದ ಆರ್ಥಿಕತೆಗೆ ಸಹಕಾರಿ : ಐಎಂಎಫ್




**ನವದೆಹಲಿ:** ಭಾರತ ಲಸಿಕೆ ವಿಷಯವನ್ನು ಉತ್ತಮವಾಗಿ ನಿಭಾಯಿಸುತ್ತಿದ್ದು ಇದು ದೇಶದ ಆರ್ಥಿಕತೆ ಉತ್ತಮಗೊಳ್ಳುವುದಕ್ಕೂ ಸಹಕಾರಿಯಾಗಿದೆ ಎಂದು ಐಎಂಎಫ್‌ನ ಉನ್ನತ ಅಧಿಕಾರಿ ಗೀತಾ ಗೋಪಿನಾಥ್ ಹೇಳಿದ್ದಾರೆ. 2021ನೇ ವರ್ಷದಲ್ಲಿ ಆರ್ಥಿಕ ಮುನ್ನೋಟವನ್ನು ಐಎಂಎಫ್ ಬಿಡುಗಡೆ ಮಾಡಿದ್ದು ಬೆಳವಣಿಗೆ ದರವನ್ನು ಶೇ.9.5ರಷ್ಟಕ್ಕೆ ಅಂತಾರಾಷ್ಟ್ರೀಯ ಸಂಸ್ಥೆ ನಿಗದಿಪಡಿಸಿದೆ. ಈ ವರ್ಷ ಭಾರತಕ್ಕೆ ನಾವು ಆರ್ಥಿಕ ಮುನ್ನೋಟವನ್ನು ಬದಲಾವಣೆ ಮಾಡುವ ಅಗತ್ಯವಿಲ್ಲ. ಅಂದರೆ ಭಾರತ ಅತ್ಯಂತ ಸವಾಲಿನ ಎರಡನೇ ಅಲೆಯ ಕೋವಿಡ್-19ನ್ನು ಸಮರ್ಥವಾಗಿ ನಿಭಾಯಿಸಿದೆ. ಪರಿಣಾಮ ಜುಲೈನಲ್ಲಿ ಕಡಿಮೆ ಪ್ರಕರಣಗಳು ದಾಖಲಾಗುವುದಕ್ಕೆ ಸಾಧ್ಯವಾಯಿತು. ಆದರೆ ನಮ್ಮ ಆರ್ಥಿಕ ಮುನ್ನೋಟದಲ್ಲಿ ಭಾರತದ ಮಟ್ಟಿಗೆ ಯಾವುದೇ ಬದಲಾವಣೆಗಳೂ ಇಲ್ಲ ಎಂದು ಐಎಂಎಫ್‌ನ ಮುಖ್ಯ ಆರ್ಥಿಕ ತಜ್ಞೆ ಗೀತಾ ಗೋಪಿನಾಥ್ ಅಭಿಪ್ರಾಯಪಟ್ಟಿದ್ದಾರೆ.

ವಿಶ್ವ ಆರ್ಥಿಕ ಮುನ್ನೋಟದಲ್ಲಿ ಭಾರತಕ್ಕೆ ಸಂಬಂಧಿಸಿದ ಮುನ್ನೋಟದಲ್ಲಿ ಏನೂ ಬದಲಾವಣೆ ಇಲ್ಲ. ಕಳೆದ ಬಾರಿಯಷ್ಟೇ ಇದೆ. 2021ರಲ್ಲಿ ಶೇ.3ರಷ್ಟು ಪಾಯಿಂಟ್‌ಗಳಿವೆ ಹಾಗೂ ಏಪ್ರಿಲ್‌ನ ಶೇ.1.6ರಷ್ಟು ಏಪ್ರಿಲ್‌ನ ಪ್ರಕ್ಷೇಪಗಳಿಗಿಂತ ಪಾಯಿಂಟ್‌ಗಳಷ್ಟು ಕುಸಿತವಿದೆ ಎಂದು ಐಎಂಎಫ್ ಹೇಳಿದೆ. ಐಎಂಎಫ್ ಹಾಗೂ ವಿಶ್ವಬ್ಯಾಂಕ್‌ನ ವಾರ್ಷಿಕ ಸಭೆಗೂ ಮುನ್ನ ಡಬ್ಲ್ಯುಇಒ (ವಿಶ್ವ ಆರ್ಥಿಕ ಮುನ್ನೋಟ)ದಲ್ಲಿ ಕೋವಿಡ್-19ನಿಂದ ಶೇ.7.3ರಷ್ಟು ಕುಸಿತ ಕಂಡಿದ್ದ ಭಾರತದ ಆರ್ಥಿಕತೆ 2021ರಲ್ಲಿ ಶೇ.9.5ರಷ್ಟು ಬೆಳೆಯಲಿದೆ ಹಾಗೂ 2022ರಲ್ಲಿ ಶೇ.8.5ರಷ್ಟಿರಲಿದೆ ಎಂದು ವರದಿಯಲ್ಲಿ ತಿಳಿದುಬಂದಿದೆ. ಜಾಗತಿಕ ಮಟ್ಟದಲ್ಲಿ 2021ನೇ ಸಾಲಿನಲ್ಲಿ ಶೇ.5.9ರಷ್ಟು ಬೆಳವಣಿಗೆ ದಾಖಲಾಗಿದ್ದು, 2022ರಲ್ಲಿ ಶೇ.4.9ರಷ್ಟಿರಲಿದೆ. ಅಮೆರಿಕದ ಬೆಳವಣಿಗೆ ಈ ವರ್ಷ ಶೇ.6ರಷ್ಟು ಹಾಗೂ ಮುಂದಿನ ವರ್ಷ ಶೇ.5.2ರಷ್ಟು ಇರಲಿದೆ. ಇತ್ತ ಚೀನಾ ಈ ವರ್ಷ ಐಎಂಎಫ್ ಪ್ರಕಾರ ಶೇ.8ರಷ್ಟು ಹಾಗೂ 2022ರಲ್ಲಿ ಶೇ.5.6ರಷ್ಟು ಬೆಳವಣಿಗೆ ಇರಲಿದೆ.

ಕೈಗಾರಿಕಾ ಉತ್ಪಾದನೆ ಶೇ.11.9ರಷ್ಟು ಬೆಳವಣಿಗೆ 2
ಶಿವ ಸಹಕಾರಿ ಬ್ಯಾಂಕ ಲಿ., ಶಿಕಾರಿಪುರ : 25ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ 4
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಅತ್ಮೀಯ ಸಹಕಾರಿಗಳೇ...



### ಜಾಗತಿಕ ಹಸಿವು ಸೂಚ್ಯಂಕದಲ್ಲಿ ಕುಸಿತ ವಿಷಾದಕರ

ನಿಮಗೆಲ್ಲ ನೆನಪಿರಬೇಕು; 2016 ನವೆಂಬರ್ 8ರಂದು ರಾತ್ರಿ ಇದ್ದಕ್ಕಿದಂತೆ ಕಿರುತೆರೆಯ ಮೇಲೆ ಕಾಣಿಸಿಕೊಂಡ ಪ್ರಧಾನಿ ನರೇಂದ್ರ ಮೋದಿ ಅವರು ನೋಟು ಅಮಾನ್ಯೀಕರಣವನ್ನು ಘೋಷಿಸಿದ್ದರು. ಆಗ ಚಾಲ್ತಿಯಲ್ಲಿದ್ದ ರೂ. 1000 ಮತ್ತು ರೂ. 500ರ ನೋಟುಗಳು ಇನ್ನು ಮುಂದೆ ಮಾನ್ಯ ಅಲ್ಲ ಎಂದು ಘೋಷಿಸಿದ್ದರು.

ಏನಾಗುತ್ತಿದೆ ಎನ್ನುವ ಭಯ, ಆತಂಕದಲ್ಲಿದ್ದ ಜನರಿಗೆ ಪ್ರಧಾನಿ ನೋಟು ಅಮಾನ್ಯೀಕರಣಕ್ಕೆ ಕಾರಣಗಳನ್ನೂ ನೀಡಿದ್ದರು. ಅವುಗಳಲ್ಲಿ ಮುಖ್ಯವಾದ ಕಾರಣಗಳೆಂದರೆ ದೇಶದಲ್ಲಿ ಚಲಾವಣೆಯಲ್ಲಿರುವ ಕಪ್ಪು ಹಣಕ್ಕೆ ಕಡಿವಾಣ ಹಾಕುವುದು, ಕಪ್ಪುಹಣದ ಬಲದಿಂದ ನಡೆಯುತ್ತಿರುವ ಗಡಿಯಲ್ಲಿನ ಭಯೋತ್ಪಾದನೆಗೆ ಮಟ್ಟ ಹಾಕುವುದು ಹಾಗೂ ಮಾದಕವಸ್ತು ಜಾಲವನ್ನು ತೊಡೆದುಹಾಕುವುದು.

ಈ ಐತಿಹಾಸಿಕ ಈ ಭಾಷಣ ಕೇಳಿದ ಜನ, ತಮಗೆ ಎಷ್ಟೇ ಕಷ್ಟವಾದರೂ ನಿಮ್ಮೊಂದಿಗೆ ನಾವಿದ್ದೇವೆ ಎನ್ನುವ ಭಾವನೆ ವ್ಯಕ್ತಪಡಿಸಿದ್ದರು. ನಂತರ ಯಾವುದೇ ರೀತಿಯಲ್ಲೂ ನಕಲು ಮಾಡಲಾಗದ ಅಧುನಿಕ ಮುದ್ರಣ ತಂತ್ರಜ್ಞಾನದಲ್ಲಿ ಮುದ್ರಿಸಿದ ನೂತನ ನೋಟುಗಳನ್ನು ಚಲಾವಣೆಗೆ ತರಲಾಯಿತು.

ನಂತರ ಏನಾಯಿತು ಎಂದು ನೋಡುವ; ಇಂದಿಗೂ ಭಯೋತ್ಪಾದನೆಯ ಕೃತ್ಯಗಳು ದಿನ ನಿತ್ಯವೆಂಬಂತೆ ನಡೆಯುತ್ತಲೇ ಇದ್ದರೆ, ಎಲ್ಲೆಡೆ ನಕಲಿ ನೋಟುಗಳ ಹಾವಳಿ ಇದೆ ಎಂದು ರಿಜರ್ವ್ ಬ್ಯಾಂಕ್ ಜನರಿಗೆ ಎಚ್ಚರಿಕೆ ನೀಡಬೇಕಾಗಿ ಬಂತು. ಇದು ಸಾಲದೆಂಬಂತೆ ದಿನ ಪತ್ರಿಕೆಗಳಲ್ಲಿ ಟಿವಿ ಮಾಧ್ಯಮಗಳಲ್ಲಿ ಮಾದಕವಸ್ತು ವಶಪಡಿಸಿಕೊಂಡ ಸುದ್ದಿಗಳು ಬರುತ್ತಲೇ ಇವೆ. ಕೆಲ ವಾರಗಳ ಹಿಂದೆ ಗುಜರಾತಿನ ಬಂದರಿನಲ್ಲಿ ರೂ.30ಸಾವಿರ ಕೋಟಿ ಮೊತ್ತದ ಮಾದಕವಸ್ತು ಜಪ್ತಿ ಮಾಡಲಾಗಿತ್ತು. ಬೆಂಗಳೂರಿನಲ್ಲೇ ಹತ್ತಾರು ಕೋಟಿ ರೂಪಾಯಿ ಬೆಲೆಯ ಮಾದಕ ವಸ್ತು ಜಪ್ತಿಯಾಗಿತ್ತು. ಅಂದರೆ, ಯಾವುದೂ ನಿಂತಿಲ್ಲ ಅಥವ ಕಮ್ಮಿಯಾಗಿಲ್ಲ ಬದಲಿಗೆ ಹೆಚ್ಚಾಗುತ್ತಲೇ ಇದೆ.

ಅದೇನೇ ಇರಲಿ; ದಸರಾ ಸಡಗರದ ನಡುವೆ ನಮ್ಮ ದೇಶದಲ್ಲಿ ಹಸಿದವರ ಸಂಖ್ಯೆ ಹೆಚ್ಚಿರುವ ವಿಷಾದಕರ ಸಂಗತಿ ಬೆಳಕಿಗೆ ಬಂದಿದೆ. ಜಾಗತಿಕ ಹಸಿವು ಸೂಚ್ಯಂಕ 2021ರ ಪಟ್ಟಿಯಲ್ಲಿ ಅಪೌಷ್ಟಿಕತೆ ನಿವಾರಣೆಗಾಗಿ ಶ್ರಮಿಸುತ್ತಿರುವ 116 ರಾಷ್ಟ್ರಗಳಲ್ಲಿ ನಮ್ಮ ದೇಶ 101ನೇ ಸ್ಥಾನಕ್ಕೆ ಕುಸಿದಿದೆ. ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ನೇಪಾಳಗಳಿಗಿಂತ ಹಿಂದುಳಿದಿದೆ. ಚೀನಾ, ಬ್ರೆಜಿಲ್, ಕುವೈತ್ ಸೇರಿದಂತೆ 18 ರಾಷ್ಟ್ರಗಳು ಮೊದಲ ಸ್ಥಾನದಲ್ಲಿದ್ದರೇ ಭಾರತ 101ನೇ ಸ್ಥಾನಕ್ಕೆ ಕುಸಿದಿರುವುದು ಕಳವಳಕಾರಿ ವಿಷಯವಾಗಿದೆ.

ಇಲ್ಲಿ ಗಮನಿಸಬೇಕಾದ್ದು; ನರೇಂದ್ರ ಮೋದಿಯವರು ಪ್ರಧಾನಿಯಾಗುವ 2014ರ ಮೊದಲು ನಮ್ಮ ದೇಶ 55ನೇ ಸ್ಥಾನದಲ್ಲಿತ್ತು. ನಂತರ ಅಚ್ಚೇದಿನ್ ಆಡಳಿತದಲ್ಲಿ ಕುಸಿಯುತ್ತಾ 2016ರಲ್ಲಿ 97ನೇ ಸ್ಥಾನದಲ್ಲಿತ್ತು ಹಾಗೇ ಇದೀಗ 101ನೇ ಸ್ಥಾನಕ್ಕೆ ಕುಸಿದಿದೆ.

ಕೋವಿಡ್ ಸಂಕಷ್ಟದಲ್ಲಿರುವ ಜನರ ನೆರವಿಗೆ ಬರಬೇಕಾದ ಕೇಂದ್ರ, ರಾಜ್ಯ ಸರ್ಕಾರಗಳು ನೀಡುತ್ತಿರುವ ಪಡಿತರವನ್ನು ಕಡಿತಗೊಳಿಸುತ್ತಿವೆ ಹಾಗೂ ಬಹುತೇಕರನ್ನು ನಾನಾ ಕಾರಣಕ್ಕೆ ಪಡಿತರ ವ್ಯವಸ್ಥೆಯಿಂದಲೇ ಹೊರಗಿಡುತ್ತಿವೆ. ಈಗಲಾದರೂ ಸರ್ಕಾರಗಳು ಎಚ್ಚೆತ್ತುಕೊಂಡು ಹಸಿದ ಜನರ ನೆರವಿಗೆ ಧಾವಿಸಲಿ ಎಂದು ಆಶಿಸುತ್ತೇನೆ.

▶▶ ಎಚ್.ಕೆ. ಪಾಟೀಲ
ಅಧ್ಯಕ್ಷರು

## ಕರ್ಣಾಟಕ ಬ್ಯಾಂಕ್ ಅಧ್ಯಕ್ಷರಾಗಿ ಪ್ರದೀಪ್ ಕುಮಾರ ಪಂಜ

**ಮಂಗಳೂರು :** ಕರ್ಣಾಟಕ ಬ್ಯಾಂಕಿನ ಸ್ವತಂತ್ರ ನಿರ್ದೇಶಕ ಪ್ರದೀಪ್ ಕುಮಾರ್ ಪಂಜ ಅವರನ್ನು ಬ್ಯಾಂಕಿನ ಅರೆಕಾಲಿಕ ಅಧ್ಯಕ್ಷರನ್ನಾಗಿ ನವೆಂಬರ್ 14ರಿಂದ ಅನ್ವಯವಾಗುವಂತೆ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದ್ದು, ಇದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅನುಮೋದಿಸಿದೆ. ಬ್ಯಾಂಕಿನ ಈಗಿನ ಅಧ್ಯಕ್ಷ ಪಿ. ಜಯರಾಮ ಭಟ್ ಅವರ ಅಧಿಕಾರ ಅವಧಿ ನವೆಂಬರ್ 13ಕ್ಕೆ ಮುಗಿಯಲಿದೆ. ಪ್ರದೀಪ್ ಕುಮಾರ್ ದಕ್ಷಿಣ ಕನ್ನಡ ಜಿಲ್ಲೆಯ ಪಂಜದವರಾಗಿದ್ದು, 2020ರ ಆಗಸ್ಟ್19ರಿಂದ ಕರ್ಣಾಟಕ ಬ್ಯಾಂಕ್ ನಿರ್ದೇಶಕರಾಗಿದ್ದಾರೆ.



## ಕೈಗಾರಿಕಾ ಉತ್ಪಾದನೆ ಶೇ.11.9ರಷ್ಟು ಬೆಳವಣಿಗೆ

ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ಆಗಸ್ಟ್‌ನಲ್ಲಿ ಶೇ.11.9ರಷ್ಟು ಬೆಳವಣಿಗೆ ಕಂಡಿದೆ ಎಂದು ಎನ್‌ಎಸ್‌ಒ ಮಾಹಿತಿ ನೀಡಿದೆ. ಎನ್‌ಎಸ್‌ಒ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ.77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯವು ಶೇ.9.7ರಷ್ಟು ಬೆಳವಣಿಗೆ ಕಂಡಿದೆ. ಗಣಿಗಾರಿಕೆಯ ಉತ್ಪಾದನೆಯು ಶೇ.23.6ರಷ್ಟು ಮತ್ತು ವಿದ್ಯುತ್ ಉತ್ಪಾದನೆಯು ಶೇ.16ರಷ್ಟು ಹೆಚ್ಚಾಗಿದೆ.

## ಚಿಲ್ಲರೆ ಹಣದುಬ್ಬರ ಇಳಿಕೆ

**ನವದೆಹಲಿ :** ಆಹಾರ ವಸ್ತುಗಳ ಬೆಲೆ ಕಡಿಮೆ ಆಗಿರುವುದರಿಂದ ಚಿಲ್ಲರೆ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ.4.35ಕ್ಕೆ ಇಳಿಕೆ ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಂಗಳವಾರ ಹೇಳಿದೆ. ಗ್ರಾಹಕ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ.5.30ರಷ್ಟಿತ್ತು. 2020ರ ಸೆಪ್ಟೆಂಬರ್‌ನಲ್ಲಿ ಶೇ.7.27ರಷ್ಟು ಗರಿಷ್ಠ ಮಟ್ಟಕ್ಕೆ ತಲುಪಿತ್ತು. ಆಹಾರ ವಸ್ತುಗಳ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ.3.11ರಷ್ಟು ಇತ್ತು. ಇದು ಸೆಪ್ಟೆಂಬರ್‌ನಲ್ಲಿ ಶೇ.0.68ಕ್ಕೆ ಇಳಿಕೆ ಆಗಿದೆ ಎಂದು ಎನ್‌ಎಸ್‌ಒ ಬಿಡುಗಡೆ ಮಾಡಿರುವ ಮಾಹಿತಿಯಲ್ಲಿ ಇದೆ.



## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ



ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ 2020-21ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಆರ್. ರವರು ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀ ಮಂಜುನಾಥ ಪಿ. ರವರು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು.



ಬೆಂಗಳೂರಿನ ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕಿನ 2020-21ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹೆಚ್.ಸಿ. ಗೋಪಾಲರವರು ಹಾಗೂ ಬ್ಯಾಂಕಿನ ನಿರ್ದೇಶಕರಾದ ಶ್ರೀ ಚಂದ್ರಮೌಳಿ ಎಸ್. ರವರು ಮಹಾಮಂಡಳದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲರವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀ ಮಂಡಲೀಕ ಎನ್. ಕೇರೂರ ಉಪಸ್ಥಿತರಿದ್ದರು.




ಮಹಾಮಂಡಳದ ಅಧ್ಯಕ್ಷರು ಹಾಗೂ ನ್ಯಾಫಕಬ್‌ನ ಪ್ರೆಸಿಡೆಂಟ್ ಎಮಿರೆಟಿಸ್‌ರವರಾದ ಸನ್ಮಾನ್ಯ ಡಾ|| ಎಚ್.ಕೆ. ಪಾಟೀಲರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪಡೆದ ನಿಮಿತ್ತ ಅವರನ್ನು ನ್ಯಾಷನಲ್ ಕೋ-ಆಪರೇಟಿವ್ ಯೂನಿಯನ್ ಆಫ್ ಇಂಡಿಯಾದ (ಎನ್‌ಸಿಯುಐ) ಅಧ್ಯಕ್ಷರು ಹಾಗೂ ನ್ಯಾಪಕಬ್ ನಿರ್ದೇಶಕರಾದ ಶ್ರೀ ದಿಲೀಪ ಸಂಘಾನಿರವರು ನ್ಯಾಫಕಬ್‌ನ ವಾರ್ಷಿಕ ಸರ್ವಸದಸ್ಯರ ಮಹಾಸಭೆಯಲ್ಲಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ನ್ಯಾಫಕಬ್‌ನ ಅಧ್ಯಕ್ಷರಾದ ಶ್ರೀ ಜ್ಯೋತೀಂದ್ರ ಮೆಹ್ತಾರವರು ಹಾಗೂ ನ್ಯಾಪಕಬ್‌ನ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

## ಶ್ರೀ ವೀರಪುಲಿಕೇಶಿ ಕೋ-ಆಪರೇಟಿವ್ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ ರಚನೆ



**ಬಾದಾಮಿ :** ಶ್ರೀ ವೀರಪುಲಿಕೇಶಿ ಕೋ-ಆಪರೇಟಿವ್ ಬ್ಯಾಂಕ್ ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯನ್ವಯ ಬ್ಯಾಂಕಿನ ವ್ಯವಸ್ಥಾಪನಾ ಮಂಡಳಿ (ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್)ಯನ್ನು ರಚಿಸಿಕೊಳ್ಳಲಾಗಿದೆ. ಸದರಿ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಪ್ರಥಮ ಸಭೆಯು ದಿನಾಂಕ : 23.08.2021ರಂದು ಸೇರಿ ಶ್ರೀ ಎ.ಸಿ. ಪಟ್ಟಣದ ಇವರನ್ನು ವ್ಯವಸ್ಥಾಪನಾ ಮಂಡಳಿಯ ಚೇರಮನ್‌ರಾಗಿ ಆಯ್ಕೆ ಮಾಡಿರುತ್ತಾರೆ. ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾಗಿ ಶ್ರೀ ಜಿ.ಎಚ್. ಘಟ್ಟದ, ಶ್ರೀ ಕೆ.ಎಂ. ಪಟ್ಟಣಶೆಟ್ಟಿ, ಶ್ರೀ ಬಿ.ಎಂ. ಮಿಟ್ಟಲಕೋಡ, ಶ್ರೀ ಟಿ.ಎಂ. ಬೆನಕಟ್ಟಿ ರವರುಗಳು ಆಯ್ಕೆಯಾಗಿರುತ್ತಾರೆ. ಪ್ರಥಮ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಕೆ. ಪಟ್ಟಣಶೆಟ್ಟಿ ರವರು ಭಾಗವಹಿಸಿ ನೂತನವಾಗಿ ಆಯ್ಕೆಯಾದ ಚೇರಮನ್ ಹಾಗೂ ಸದಸ್ಯರನ್ನು ಸ್ವಾಗತಿಸಿ ಅಭಿನಂದನೆಗಳನ್ನು ಸಲ್ಲಿಸಿದರು.

# ಶಿವ ಸಹಕಾರಿ ಬ್ಯಾಂಕ ಲಿ., ಶಿಕಾರಿಪುರ : 25ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ




ದಿನಾಂಕ : 04-10-2021ರ ಸೋಮವಾರದಂದು ಶಿಕಾರಿಪುರದ ಶಿವ ಸಹಕಾರಿ ಬ್ಯಾಂಕಿನ ಆಡಳಿತ ಮಂಡಳಿ ಕಛೇರಿಯಲ್ಲಿ ಶಿವ ಸಹಕಾರಿ ಬ್ಯಾಂಕ್ ನಿಯಮಿತ ಶಿಕಾರಿಪುರ ಇದರ 25ನೇ ವಾರ್ಷಿಕ ಸರ್ವಸದಸ್ಯರ ಭೌತಿಕ ಮಹಾಸಭೆಯು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ.ಮಹದೇವಪ್ಪ ಮಾರವಳ್ಳಿ ಇವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು.

ಬ್ಯಾಂಕಿನ ಅಧ್ಯಕ್ಷರು ಮಹಾಸಭೆಯಲ್ಲಿ ಮಾತನಾಡುವ ಪ್ರಾರಂಭದಲ್ಲಿ ಶಿವ ಸಹಕಾರಿ ಬ್ಯಾಂಕಿನ ಹುಟ್ಟಿಗೆ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಶ್ರೀ ಶ್ರೀ ಶ್ರೀ ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಬೃಹನ್ಮಠ, ಸಿರಿಗೆರೆ ಇವರ ಅನುಗ್ರಹ ಮತ್ತು ಆಶೀರ್ವಾದವೇ ಒಂದು ದೊಡ್ಡ ಪ್ರೇರಕ ಶಕ್ತಿಯಾಗಿದೆ ಎಂದು ತರಳಬಾಳು ಶ್ರೀಗಳನ್ನು ಸ್ಮರಿಸಿದರು. ಜ್ಯೋತಿ ಬೆಳಗುವುದರೊಂದಿಗೆ ಮಹಾಸಭೆಯ ಕಾರ್ಯಕ್ರಮಗಳು ವಿಧ್ಯುಕ್ತವಾಗಿ ಪ್ರಾರಂಭಗೊಂಡವು, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಿ ಸನ್ಮಾನಿಸಲಾಯಿತು ನಂತರ ಕಳೆದ ಸಾಲಿನ ಮಹಾಸಭೆಯಿಂದ ಈ ದಿನದ ಮಹಾಸಭೆಯವರೆಗೆ ನಿಧನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಹಾಸಬೆಯ ಕಲಾಪಗಳು ಮುಗಿದ ಬಳಿಕ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ ಮಹದೇವಪ್ಪನವರು ಅಧ್ಯಕ್ಷೀಯ ಬಾಷಣ ಮಾಡುತ್ತಾ ಕಳೆದ ಹತ್ತು ವರ್ಷಗಳಲ್ಲಿ ಬ್ಯಾಂಕಿನ ಒಟ್ಟು ವ್ಯವಹಾರವು 3 ಪಟ್ಟಿಗೂ ಮೀರಿ ವಹಿವಾಟು ವೃದ್ಧಿಸಿಕೊಂಡಿದೆ, ದಿನಾಂಕ : 31.3.2021ರ ಅಂತ್ಯಕ್ಕೆ ದುಡಿಯುವ ಬಂಡವಾಳವು ರೂ.36.91 ಕೋಟಿಗಳಾಗಿರುತ್ತದೆ. ಅಂತೆಯೇ ಪ್ರಸಕ್ತ ಸಾಲಿನಲ್ಲಿ ನಮ್ಮ ಬ್ಯಾಂಕ್ ರೂ. 20 ಲಕ್ಷ ಆದಾಯ ತೆರಿಗೆಗಾಗಿ ಅನುವು ಕಾಯ್ದಿರಿಸಿದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮದಂತೆ ರೂ. 7 ಲಕ್ಷ ಎನ್.ಪಿ.ಎ ಬಾಬ್ತಿಗೆ ಮೀಸಲು ಕಾಯ್ದಿರಿಸಿದ ನಂತರ ರೂ.52.46 ಲಕ್ಷ ನಿವ್ವಳ ಲಾಭ ಗಳಿಸಿರುವುದು ಈವರೆಗಿನ ದಾಖಲೆಯಾಗಿದೆ. ಹಾಗೂ 31.3.2021ರ ಅಂತ್ಯಕ್ಕೆ ರೂ.31.22 ಕೋಟಿ ಠೇವಣಿ ಸಂಗ್ರಹಣೆ ಮಾಡಿ ರೂ.23.04 ಕೋಟಿ ಸಾಲ ಮುಂಗಡ ನೀಡಿರುತ್ತೇವೆ. ದಿನಾಂಕ : 31.03.2021 ಕ್ಕೆ ಇದ್ದಂತೆ ನಮ್ಮ ಬ್ಯಾಂಕಿನ ಒಟ್ಟು ವ್ಯವಹಾರ ರೂ.54.24 ಕೋಟಿಗೆ ತಲುಪಿರುತ್ತದೆ ಮತ್ತು ವರದಿ ಸಾಲಿನಲ್ಲಿ ರೂ.138 ಕೋಟಿ ಗಳಿಗೂ ಅಧಿಕ ಹಣದ ವಹಿವಾಟು ನೆಡೆದಿರುತ್ತದೆ (Total turnover of the Bank) ಮತ್ತು ಒಟ್ಟು ಬ್ಯಾಂಕಿನ ನಿವ್ವಳ ಆಸ್ತಿ (Net worth) ಸ್ವಂತ ನಿಧಿಗಳನ್ನೊಳಗೊಂಡಂತೆ ರೂ.5.68 ಕೋಟಿಗಳಿದ್ದು ಇದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಬ್ಯಾಂಕಿನ ಅಧ್ಯಕ್ಷರು ವರದಿ ಸಾಲಿನಲ್ಲಿ ಶೇ.10% ರಷ್ಟು ಡಿವಿಡೆಂಡ್ ಘೋಷಣೆ ಮಾಡಲಾಗಿದೆ ಎಂದು ತಿಳಿಸಿದ ಕೂಡಲೇ ಮಹಾಸಭೆಯಲ್ಲಿನ ಸರ್ವ ಸದಸ್ಯರು ಬಾರಿ ಹರ್ಷಘೋದ್ಗಾರದಿಂದ ಕರತಡನ ಮಾಡಿದರು.

ಬ್ಯಾಂಕಿನ ಮಹಾಸಭೆಯಲ್ಲಿ ಶ್ರೀ ಎ ಪರಮೇಶ್ವರಪ್ಪ ಹಿತ್ತಲ, ಶ್ರೀ ಟಿ.ಎಸ್. ಶಿವಶಂಕ್ರಪ್ಪ ಹಿರೇಜಂಬೂರು, ಹೆಚ್ ಚೆನ್ನಪ್ಪ ಹಳೆಗೂದ್ದನಕೊಪ್ಪ, ಶ್ರೀ ಜೆ ರಾಮಪ್ಪ ಕಲ್ಮನೆ ಹಾಗೂ ಶ್ರೀ ಬಿ. ಸತೀಶ ತಾಳಗುಂದ ಇವರುಗಳು ದಿನಾಂಕ 31-03-2021ಕ್ಕೆ ಇದ್ದಂತೆ ಬ್ಯಾಂಕಿನ ಆರ್ಥಿಕ ತಃಖ್ತೆಗಳ ಬಗ್ಗೆ ವಿವಿದ ಮಾಹಿತಿ ಪಡೆದುಕೂಂಡರು ಹಾಗೂ ಪೂರಕ ಸಲಹೆ ಸೂಚನೆ ನೀಡಿದರು ಮತ್ತು ತಾಳಗುಂದ ಹೋಬಳಿಯ ಸದಸ್ಯರ ಬಹುದಿನದ ಬೇಡಿಕೆಯಾದ ಶಿರಾಳಕೊಪ್ಪದಲ್ಲಿ ಶಿವ ಸಹಕಾರಿ ಬ್ಯಾಂಕಿನ ಶಾಖೆ ತೆರೆಯುವ ಬಗ್ಗೆ ಹಾಗೂ ಬುಸಿನೆಸ್ ಕಾರೆಸ್ಪಾಂಡೆಂಟ್ ಅಥವಾ ಬುಸಿನೆಸ್ ಫೆಸಿಲಿಟೆಟರ್ಸ್ ನೇಮಕ ಮಾಡುವ ಬಗ್ಗೆ ಆಡಳಿತ ಮಂಡಳಿಯವರಿಗೆ ಒತ್ತಾಯ ಪಡಿಸಿದರು.

ಈ ಬಗ್ಗೆ ಮಾತನಾಡಿದ ಬ್ಯಾಂಕಿನ ಅಧ್ಯಕ್ಷರು ತಾಳಗುಂದ ಹೋಬಳಿಯವರ ಬಹುದಿನದ ಬೇಡಿಕೆಯಾದ ಶಿರಾಳಕೊಪ್ಪದಲ್ಲಿ ಶಿವ ಸಹಕಾರಿ ಬ್ಯಾಂಕಿನ ಶಾಖೆ ತೆರೆಯಲು ಆರ್.ಬಿ.ಐ. ನೊಂದಿಗೆ ಸಾಕಷ್ಟು ಪತ್ರ ವ್ಯವಹಾರ ನಡೆಸಲಾಗಿದೆ. ಇತ್ತೀಚಿಗೆ ರಿಜರ್ವ ಬ್ಯಾಂಕಿನ ತಜ್ಞರ ಸಮಿತಿಯು ಶಾಖೆ ತೆರೆಯಲು ಬ್ಯಾಂಕಿನ ನಿವ್ವಳ ಆಸ್ತಿ (Net worth) ರೂ.10 ಕೋಟಿ ಹೊಂದಲೇಬೇಕೆನ್ನುವ ನಿಬಂಧನೆಯನ್ನು ರೂ.5 ಕೋಟಿಗೆ ನಿಗದಿಪಡಿಸಿ ಸರಳೀಕರಣಗೋಳಿಸಿದೆ. ಆದರೆ ಸುಸ್ತಿಸಾಲದ ನಿವ್ವಳ ಅನುತ್ಪಾದಕ ಆಸ್ತಿಗಳ ಪ್ರಮಾಣವೂ ಶೇ.3% ಕ್ಕಿಂತ ಹೆಚ್ಚಿರಬಾರದು. ಆದ್ದರಿಂದ ಸಾಲ ಪಡೆದ ಫಲಾನುಭವಿಗಳು ಸಕಾಲದಲ್ಲಿ ಪಡೆದ ಸಾಲವನ್ನು ಮರುಪಾವತಿಸಿ ಬ್ಯಾಂಕಿನ ಆರ್.ಬಿ.ಐ ರೇಟಿಂಗ್ 'ಎ' ಗ್ರೇಡ್ ಬರುವಂತೆ

7ನೇ ಪುಟಕ್ಕೆ...

# ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿ., ಬಾಗಲಕೋಟೆ : ರೂ.4.07 ಕೋಟಿ ಲಾಭ





**ಬಾಗಲಕೋಟೆ :** ಸೆಪ್ಟೆಂಬರ್ 19ರಂದು ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕಿನ ಆವರಣದಲ್ಲಿರುವ ಬಸವ ಕಲಾ ವೇದಿಕೆಯಲ್ಲಿ ಜರುಗಿದ 104ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷ ಪ್ರಕಾಶ ತಪಶೆಟ್ಟಿಯವರು ಸ್ವಾಗತ ಭಾಷಣ ಮಾಡುತ್ತ, ಬ್ಯಾಂಕಿನ ಅಭಿವೃದ್ಧಿ ಕುರಿತು ಅಂಕಿ ಅಂಶಗಳನ್ನು ನೀಡಿದರು. ಮುಂದುವರೆದು ಮಾತನಾಡುತ್ತ ಬ್ಯಾಂಕು ಆಧುನಿಕ ತಂತ್ರಜ್ಞಾನದ ಎಲ್ಲ ಸೌಲಭ್ಯಗಳನ್ನು ಅಳವಡಿಸಿಕೊಂಡಿದೆ. ಎಲ್ಲ ಶಾಖೆಗಳಿಗೂ ಕೋರ್ ಬ್ಯಾಂಕಿಂಗ ವ್ಯವಸ್ಥೆ, ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆ (RTGS / NEFT / IMPS) ಅತ್ಯಾಧುನಿಕ ತಂತ್ರಜ್ಞಾನದ (UPI Certified Payments Interface) ಉದ್ಘಾಟಿಸಿ ಲೋಕಾರ್ಪಣೆಗೊಳಿಸಲಾಯಿತು. ಯುಪಿಐ ಆಧಾರಿತ ಹಣಕಾಸು ವರ್ಗಾವಣೆ ವ್ಯವಸ್ಥೆ ಪ್ರಾರಂಭಿಸಿ ಫೋನ ಪೇ, ಗೂಗಲ ಪೇ, ಪೇಟಿಎಮ್ ಹಾಗೂ ಭೀಮ್ ನಂತಹ ಸೌಲಭ್ಯಗಳನ್ನು ನೀಡಿದೆ ಎಂದು ಹೇಳಿದರು. ಭಾರತೀಯ ರಿಜರ್ವ ಬ್ಯಾಂಕಿನ ಅನುಮತಿಯ ನಂತರ ಹೊಸ ಶಾಖೆಗಳನ್ನು ಪ್ರಾರಂಭಿಸಲಾಗುವುದು ಎಂದರು. ಕೊರೊನಾದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ಯಾಂಕು 4 ಕೋಟಿ 7 ಲಕ್ಷ ಲಾಭಗಳಿಸಿದ್ದು, ನಿವ್ವಳ ನಿಷ್ಕ್ರೀಯ ಸಾಲಗಳ ಪ್ರಮಾನ ಶೇ.1.90 ಇರುವುದು ಎಂದು ತಿಳಿಸಿದರು. ಬ್ಯಾಂಕಿನ ಅಭಿವೃದ್ಧಿಗೆ ಸಹಕಾರ ನೀಡಿದ ಎಲ್ಲರನ್ನು ಸ್ಮರಿಸಿ ಧನ್ಯವಾದ ಸಲ್ಲಿಸಿದರು.

**UPI ಉದ್ಘಾಟನೆ :** ಕನ್ನಡದ ಕುಬೇರ ಸೂಫಿ ಸಂತ, ಭಾವೈಕ್ಯತೆಯ ಹರಿಕಾರ, ಪದ್ಮಶ್ರೀ ಪುರಸ್ಕೃತ ಇಬ್ರಾಹಿಂ ಸುತಾರ UPI ಆಧಾರಿತ ಹಣ ವರ್ಗಾವಣೆ ವ್ಯವಸ್ಥೆ ಉದ್ಘಾಟಿಸಿ ಲೋಕಾರ್ಪಣೆಗೊಳಿಸಿದರು ಹಾಗೂ ಮುಂದುವರೆದು ಮಾತನಾಡುತ್ತ, ಬಸವಣ್ಣನವರ ವಚನದಂತೆ ಮನುಷ್ಯ ಲೇಸನೆನಿಸುವ ಕಾರ್ಯ ಮಾಡಬೇಕು. ನಮ್ಮ ನಂತರವೂ ನಾವು ಮಾಡಿದ ಕೆಲಸ ಚಿರಂತನವಾಗಿರುವದು. ಸಮಾಜ ಸೇವೆ – ಒಳ್ಳೆಯ ಕೆಲಸಗಳನ್ನು ಯೌವ್ವನದ ವಯಸ್ಸಿನಲ್ಲಿ ಮಾಡಬೇಕು ಮತ್ತು ಗ್ರಾಹಕರು ಪಡೆದ ಸಾಲವನ್ನು ಅವಧಿಯ ಒಳಗೆ ತುಂಬಬೇಕು ಎಂದರು. ಪ್ರಕಾಶ ತಪಶೆಟ್ಟಿಯವರು 38 ವರ್ಷಗಳಿಂದ ಬ್ಯಾಂಕಿನ ಸಾರಥ್ಯವನ್ನು ವಹಿಸಿ ಮುನ್ನೆಡೆಸುತ್ತಿರುವದು ಶ್ಲಾಘನೀಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ 1) ಎಸ್.ಎಸ್. ಕುದರಿಕನ್ನೂರ 2) ಎಮ್.ಬಿ. ಮೋಟಗಿ, 3) ವ್ಹಿ.ಎಸ್. ಪಟ್ಟಣದ 4) ಎಸ್.ಎಮ್. ಹೊಸಪೇಟ ಸಿಬ್ಬಂದಿಗಳಿಗೆ ಮಾನ್ಯ ಅಧ್ಯಕ್ಷರು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಶುಭ ಹಾರೈಸಿದರು.

ವಿದ್ಯಾ ಚೇತನ ಯೋಜನೆ ಅಡಿಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಪಡೆದ ಕುಮಾರಿ ಗಂಗಮ್ಮ ಬಸಪ್ಪ ಹುಡೇದ, ಬಿ.ಎ. ಪದವಿಯಲ್ಲಿ ಪ್ರಥಮ ಸ್ಥಾನ ಪಡೆದ ಸಲ್ಮಾ ಲಂಗೋಟಿ, ಬಿ.ಎಸ್.ಸಿ.ಯಲ್ಲಿ ಪ್ರಥಮ ಸ್ಥಾನ ಪಡೆದ ರೇಖಾ ಬಿರಾದಾರ ಬಿ.ಕಾಂ. ಪದವಿಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೇಯಾ ಗೊಲಭಾವಿ ಈ ಎಲ್ಲ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವ ಧನ ನೀಡಲಾಯಿತು. ಮಹಾಸಭೆಯಲ್ಲಿ ಬ್ಯಾಂಕಿಗೆ ನೂತನವಾಗಿ ನಿರ್ದೇಶಕರಾಗಿ ನೇಮಕಗೊಂಡ ಬಸವರಾಜ ಹಿರೇಗೌಡರ ಹಾಗೂ ಮಹಾಲಿಂಗಪೂರ ಶಾಖೆಗೆ ಶಾಖಾ ಮಾರ್ಗದರ್ಶಕರಾಗಿ ನೇಮಕಗೊಂಡ ಪದ್ಮಶ್ರೀ ಪುರಸ್ಕೃತಗೊಂಡ ಇಬ್ರಾಹಿಂ ಸುತಾರ ಮತ್ತು ಸಜ್ಜನ ಸಾಹೇಬ ಪೆಂಡಾರಿಯವರನ್ನು ಸನ್ಮಾನಿಸಲಾಯಿತು.

ವಿವೇಕಾನಂದ ಕೇಮಾಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಅಧಿಕಾರಿಗಳಾದ ಬಿ.ಎಸ್. ನಾವಲಗಿ, ಎಸ್.ಬಿ. ಬದಾಮಿ, ಎಮ್.ಎಸ್. ಗುಡಗುಂಟಿ, ವಿಜಯಕುಮಾರ ದೊಡಮನಿ, ವ್ಹಿ.ಎಮ್. ಹಿರೇಮಠ, ಶ್ರೀಮತಿ ಬಿ.ಜಿ. ಹೊನವಾಡ, ಪಿ.ಎನ್. ಹಳ್ಳಿಕೇರಿ, ಎಸ್.ವಿ. ಹುಬ್ಬಳ್ಳಿ ಮಹಾಸಭೆಯಲ್ಲಿ ವಿಷಯಗಳನ್ನು ಮಂಡಿಸಿ ಒಪ್ಪಿಗೆ ಪಡೆದರು. ಉಪಾಧ್ಯಕ್ಷರಾದ ಎಮ್.ಜಿ. ವಾಲಿ ವಕೀಲರು ವಂದಿಸಿದ ಕಾರ್ಯಕ್ರಮವನ್ನು ಸಂಜಯ ನಡುವಿನಮನಿ, ಮಹಾಬಳೇಶ್ವರ ಗುಡಗುಂಟಿ ನಿರೂಪಿಸಿದರು. ದೂರದರ್ಶನ ಕಲಾವಿದರಾದ ಸಂತೋಷ ಗದ್ದನಕೇರಿಯವರಿಂದ ಸಂಗೀತ ಕಾರ್ಯಕ್ರಮ ಜರುಗಿತು.

ವೇದಿಕೆಯಲ್ಲಿ ನಿರ್ದೇಶಕರಾದ ಸಿ.ಟಿ. ಪಾಟೀಲ, ಎಚ್.ಎಸ್. ರಾಠೋಡ, ವ್ಹಿ.ವ್ಹಿ. ಶಿರಗಣ್ಣವರ, ಎಸ್.ಸಿ. ಆರಬ್ಬಿ, ವ್ಹಿ.ವ್ಹಿ. ಕಲಬುರ್ಗಿ, ಎಸ್.ಟಿ. ಬಳ್ಳಾರಿ, ಬಿ.ಎಮ್. ಈಟಿ, ಎಸ್.ಎಸ್. ಕಂಕಣಮೇಲಿ, ಆರ್.ವಾಯ್. ಪಟ್ಟಣದ, ಶಶಿಧರ ಜಿಗಳೂರ, ಎಸ್.ಎಸ್. ಗೋಡಿ, ಎನ್.ಎಫ್. ಪಲ್ಲೇದ, ಎಸ್.ಎಸ್. ಜಂಗಿ, ಶ್ರೀಮತಿ ಜೆ.ಸಿ. ಅಬ್ದುಲಪುರ, ಶ್ರೀಮತಿ ಯು.ಎಸ್. ಜಿಗಜಿನ್ನಿ, ಎಸ್.ಆರ್. ಕುಲಕರ್ಣಿ, ಬಿ.ಎಸ್. ಹಿರೇಗೌಡರ ಉಪಸ್ಥಿತರಿದ್ದರು.

# ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕ್ ನಿ., ಚಿಕ್ಕಮಗಳೂರು : 22ನೇ ವಾರ್ಷಿಕ ಮಹಾಸಭೆ



**ಚಿಕ್ಕಮಗಳೂರು** : ಕರ್ನಾಟಕ ಮಹಿಳಾ ಸಹಕಾರ ಬ್ಯಾಂಕಿನ 22ನೇ ವಾರ್ಷಿಕ ಮಹಾಸಭೆಯು ದಿನಾಂಕ 09/10/2021ರ ಶನಿವಾರದಂದು ಬೆಳಿಗ್ಗೆ 11.30 ಘಂಟೆಗೆ ಚಿಕ್ಕಮಗಳೂರು ನಗರದ ರಂಗಣ್ಣನವರ ಛತ್ರದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಕು.ಬಿ.ಸಿ.ಗೀತಾರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಾಲಿನಲ್ಲಿ ಬ್ಯಾಂಕ್ ಉತ್ತಮ ವ್ಯವಹಾರ ನಡೆಸಿದ್ದು, ದಿನಾಂಕ 31/03/2021 ಕ್ಕೆ 6684 ಸದಸ್ಯರಿಂದ ರೂ.6.79 ಕೋಟಿ ಷೇರು ಬಂಡವಾಳ ಸಂಗ್ರಹಣೆಯಾಗಿರುತ್ತದೆ. ಅಲ್ಲದೇ, ಬ್ಯಾಂಕಿನ ಒಟ್ಟು ಠೇವಣಾತಿಗಳ ಮೊತ್ತ ರೂ.196.15 ಕೋಟಿಗಳಿರುತ್ತದೆ ಹಾಗೂ ರೂ.134.06 ಕೋಟಿ ಹೊರಬಾಕಿ ಸಾಲವಿರುತ್ತದೆ. ಇದರೊಂದಿಗೆ ಬ್ಯಾಂಕಿನ ಒಟ್ಟು ದುಡಿಯುವ ಬಂಡವಾಳ 21306.70 ಲಕ್ಷಗಳಿದ್ದು, ಈ ಸಾಲಿನಲ್ಲಿ ಬ್ಯಾಂಕ್ ತೆರಿಗೆ ಪಾವತಿಯ ಮುನ್ನ ರೂ.341.39 ಲಕ್ಷ ಲಾಭಗಳಿಸಿದ್ದು, ತೆರಿಗೆ ಪಾವತಿ ನಂತರ ರೂ.201.39 ಲಕ್ಷ ನಿವ್ವಳ ಲಾಭ ಗಳಿಸಿರುವುದು ಉತ್ತಮ ಫಲಿತಾಂಶವಾಗಿರುತ್ತದೆ. ಬ್ಯಾಂಕಿನ ಒಟ್ಟು NPA 1.22% ಇದ್ದು, ನಿವ್ವಳ NPA 0 ಆಗಿರುತ್ತದೆ. ಬ್ಯಾಂಕ್ 'ಎ' ವರ್ಗದ ಬ್ಯಾಂಕ್ ಆಗಿ ಈ ಸಾಲಿನಲ್ಲಿ ಮುಂದುವರೆದಿರುತ್ತದೆ. ಈ ಸಾಲಿನಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸಹಕಾರ ಬ್ಯಾಂಕುಗಳಿಗೆ ಡಿವಿಡೆಂಡ್ ನೀಡಲು ಅನುಮತಿ ನೀಡಿದ್ದು, ಶೇ.12% ಡಿವಿಡೆಂಡ್ ಅನ್ನು ಮಹಾಸಭೆಯಲ್ಲಿ ಘೋಷಿಸಲಾಗಿರುತ್ತದೆ.

ಈ ಮಹಾಸಭೆಯು ಬ್ಯಾಂಕಿನ ಸದಸ್ಯರಾದ ಶ್ರೀಮತಿ ಮಮತ ಬಾಳಿಗ ರವರ ಪ್ರಾರ್ಥನೆಯಿಂದ ಪ್ರಾರಂಭವಾಗಿ, ನಿರ್ದೇಶಕರಾದ ಶ್ರೀಮತಿ ಬನಶಂಕರಿ ಜೋಷಿ ಯವರು ಸ್ವಾಗತ ಕೋರಿದ್ದು, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ ಸತೀಶ್ ಬಿ.ಆರ್ ರವರು ಬ್ಯಾಂಕಿನ ಆಡಿಟ್ ಆದ ಲೆಕ್ಕಪತ್ರವನ್ನು ಮಹಾಸಭೆಗೆ ಮಂಡಿಸಿದರು. ಶ್ರೀಮತಿ ಯಮುನ ಚನ್ನಬಸಪ್ಪಶೆಟ್ಟಿ ಯವರು ಸಭೆಗೆ ವಂದಿಸಿದರು.

ಈ ಮಹಾಸಭೆಯಲ್ಲಿ ಬ್ಯಾಂಕಿನ ಉಪಾಧ್ಯಾಕ್ಷರಾದ ಶ್ರೀಮತಿ.ಸುಧಾರಾಜು, ನಿರ್ದೇಶಕರುಗಳಾದ ಶ್ರೀಮತಿ ಸುಜಾತ ಕೃಷ್ಣಮೂರ್ತಿ, ಶ್ರೀಮತಿ ಸೌಭಾಗ್ಯ ಗೋಪಾಲನ್, ಶ್ರೀಮತಿ ಸರೋಜಮ್ಮ ಬಿ.ಎಂ, ಶ್ರೀಮತಿ ಕಮಲಾ ಬಸವರಾಜ್, ಶ್ರೀಮತಿ ಜಯಶ್ರೀ ನಂಜರಾಜ್, ಶ್ರೀಮತಿ ಜಯಲಕ್ಷ್ಮೀ ರಾಮೇಗೌಡ, ಶ್ರೀಮತಿ ತಾರಾ ಮೋಹನ್, ಶ್ರೀಮತಿ ಕವಿತ ರಾಹುಲ್‌ನಾಯಕ್, ಶ್ರೀಮತಿ ಅನುಪಮಾ ಎನ್ ಎಲ್, ಶ್ರೀಮತಿ ಮೀನಾ, ಶ್ರೀಮತಿ ಅರುಂಧತಿ ಹೆಚ್.ಎನ್, ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ಕವಿತ ಬಿ.ಸಿ, ಅಜಿತ್ ಕುಮಾರ್ ಕೆ.ಎ ಹಾಗೂ ಶ್ರೀರಾಮ್‌ರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಎಲ್ಲಾ ಸಿಬ್ಬಂದಿಗಳು ಹಾಜರಿದ್ದರು.

## ದಾಸೋಹ ನಿಧಿಗಾಗಿ ಕಾಣಿಕೆ ಸಲ್ಲಿಕೆ



**ತುಮಕೂರು** : ಸಿದ್ಧಗಂಗಾ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಡಾ॥ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ರಸ್ತೆ (ಬಿ.ಹೆಚ್.ರಸ್ತೆ), ತುಮಕೂರು. ಇಲ್ಲಿ 2020–21ನೇ ಸಾಲಿನ 28ನೇ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಅಂಗವಾಗಿ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಶ್ರೀ ಸಿದ್ಧಗಂಗಾ ಮಠದ ದಾಸೋಹ ನಿಧಿಗಾಗಿ ಕಾಣಿಕೆಯನ್ನು ಸಮರ್ಪಿಸಲಾಯಿತು.

ಅಧ್ಯಕ್ಷರಾದ ಶ್ರೀ ಟಿ.ಕೆ. ನಂಜುಂಡಪ್ಪನವರು, ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಶಂಕರಯ್ಯನವರು, ನಿರ್ದೇಶಕರುಗಳಾದ ಶ್ರೀ ಬಿ.ಎಸ್. ರುದ್ರೇಶಯ್ಯನವರು, ಶ್ರೀ ಮಹೇಶಪ್ಪನವರು, ಡಾ॥ ಆರ್.ಸಿ. ಪುಟ್ಟಬುದ್ಧಿರವರು, ಡಾ॥ ಪರಮೇಶ್‌ರವರು, ಶ್ರೀ ಟಿ.ಎಂ. ಸ್ವಾಮಿರವರು, ಶ್ರೀ ಎಸ್. ವಿಶ್ವನಾಥಯ್ಯನವರು, ಶ್ರೀ ಆರ್. ಚಿಕ್ಕಯ್ಯನವರು, ಶ್ರೀ ಎಸ್. ವಿಶ್ವನಾಥ್‌ರವರು, ಶ್ರೀ ಕೆ.ಎಂ. ಸ್ವಾಮಿರವರು, ಶ್ರೀ ರಾಮಯ್ಯನವರು, ಶ್ರೀಮತಿ ಮಂಜುಳಪ್ರಸಾದ್‌ರವರು, ಶ್ರೀಮತಿ ಡಾ॥ ರೇಣುಕಲತರವರು, ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಹೆಚ್. ಕೆ. ಶಿವಪ್ರಕಾಶ್‌ರವರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ ಸುಧಾಕರ್ ಭಟ್, ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ 2ಕೋಟಿ ರೂಪಾಯಿಯ ಒಂದು ಸುಸ್ತಿ ಸಾಲವಿದೆ. ಅದಕ್ಕಾಗಿ 40ಲಕ್ಷ ರೂಪಾಯಿಗಳ ಅನುವು ಮಾಡಲಾಗಿದೆ. ಅಡಮಾನವಿಟ್ಟ ಆಸ್ತಿಯ ಮೌಲ್ಯಮಾಪನದ ನಂತರ ಅದರ ಕನಿಷ್ಠ ಬೆಲೆಯನ್ನು 1.80ಕೋಟಿ ರೂಪಾಯಿ ಎಂದು ತೀರ್ಮಾನಿಸಲಾಗಿದೆ. ಈ ಸುಸ್ತಿ ಸಾಲವನ್ನು ಆಸ್ತಿ ಮರುನಿರ್ಮಾಣ ಕಂಪನಿಗೆ ಕನಿಷ್ಠ ಬೆಲೆಯಲ್ಲಿ ಮಾರಾಟ ಮಾಡಿದರೆ ಬ್ಯಾಂಕಿನ ಲೆಕ್ಕಪತ್ರ ಹೇಗೆ ಬರೆಯಬೇಕು ಮತ್ತು ಇದರಿಂದ ಬ್ಯಾಂಕಿಗೆ ದೊರೆಯುವ ಪ್ರಯೋಜನವೇನು?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ತುಮಕೂರು.**

**ಉತ್ತರ :** ಸುಸ್ತಿ ಸಾಲವನ್ನು ಮಾರಾಟ ಮಾಡಿದಾಗ ಆಸ್ತಿ ಮರುನಿರ್ಮಾಣ ಕಂಪನಿ ಮೌಲ್ಯವನ್ನು ನಗದು ಮತ್ತು ಭದ್ರತಾ ಪತ್ರದ ರೂಪದಲ್ಲಿ ನೀಡುತ್ತದೆ. ಮಾರಾಟದ ಮೌಲ್ಯ ರೂಪಾಯಿ 1.80ಕೋಟಿ ಇದ್ದಲ್ಲಿ (ಕನಿಷ್ಠ ಬೆಲೆ) ಕಂಪನಿ ರೂ.9ಲಕ್ಷ ನಗದು ಮತ್ತು ರೂ.1.71ಲಕ್ಷ ಭದ್ರತಾ ಪತ್ರದ ರೂಪದಲ್ಲಿ ನೀಡುತ್ತದೆಯೆಂದು ಭಾವಿಸೋಣ. ಬ್ಯಾಂಕು 40ಲಕ್ಷ ರೂಪಾಯಿಗಳ ಅನುವು ಹೊಂದಿರುವುದರಿಂದ ಸುಸ್ತಿ ಸಾಲದ ನಿವ್ವಳ ಪುಸ್ತಕ ಮೌಲ್ಯ ರೂ.160 ಲಕ್ಷವಿರುತ್ತದೆ. ಮಾರಾಟದ ಮೊತ್ತ ನಿವ್ವಳ ಪುಸ್ತಕ ಮೌಲ್ಯಕ್ಕಿಂತ ರೂ.20ಲಕ್ಷ ಅಧಿಕವಿರುವುದರಿಂದ ರೂ.20ಲಕ್ಷದಷ್ಟು ಅಧಿಕ ಅನುವು ಇರುತ್ತದೆ. ಆದರೆ, ಕೇವಲ ರೂ.9ಲಕ್ಷ ಮಾತ್ರ ನಗದು ರೂಪದಲ್ಲಿ ಪಡೆಯುವುದರಿಂದ ಈ ವರ್ಷ ಕೇವಲ ರೂ.9ಲಕ್ಷ ಮಾತ್ರ ಲಾಭ ನಷ್ಟ ಖಾತೆಗೆ ಲಾಭ ರೂಪದಲ್ಲಿ ವರ್ಗಾಯಿಸಬಹುದು ಮತ್ತು ಹೆಚ್ಚಿಗೆ ಉಳಿದಿರುವ ರೂ.11ಲಕ್ಷ ಅನುವನ್ನು ಭದ್ರತಾ ಪತ್ರದ ಮರುಪಾವತಿಯಿಂದ ನಗದು ಸ್ವೀಕರಿಸಿದ ವರ್ಷದಲ್ಲಿ ಲಾಭ ನಷ್ಟ ಖಾತೆಗೆ ವರ್ಗಾಯಿಸಬಹುದು.

ಈ ಮಾರಾಟದಿಂದ ಬ್ಯಾಂಕಿನ ಒಟ್ಟು ಮತ್ತು ನಿವ್ವಳ ಸುಸ್ತಿ ಸಾಲದ ಪ್ರಮಾಣ ಕಡಿಮೆಯಾಗುತ್ತದೆ. ಈ ವರ್ಷ ರೂ.9ಲಕ್ಷದಷ್ಟು ಲಾಭ ಜಾಸ್ತಿಯಾಗುತ್ತದೆ. ಸಾಲದ ಖಾತೆಯಿಂದ ರೂ.200ಲಕ್ಷ ಕಡಿತ ಮಾಡಿ ರೂ.171 ಲಕ್ಷವನ್ನು ನಾನ್ ಎಸ್‌ಎಲ್‌ಆರ್ ಹೂಡಿಕೆ ಎಂದು ಪರಿಗಣಿಸಬೇಕು.

---

...4ನೇ ಪುಟದಿಂದ

ಸಹಕರಿಸಿದರೆ ನಮ್ಮ ಬ್ಯಾಂಕ್ ಮುಂದಿನ ಎರಡೇ ವರ್ಷದ ಕಾಲಮಿತಿಯಲ್ಲಿ ಶಿರಾಳಕೊಪ್ಪದಲ್ಲಿ ಶಾಖೆ ತೆರೆಯಬಹುದಾಗಿದೆ. ಈ ಗುರುತರವಾದ ಸಾಧನೆಗೆ ಸರ್ವ ಸದಸ್ಯರೆಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಶಾಖೆ ತೆರೆಯುವ ಬಗ್ಗೆ ಹಾಗೂ ಬಿ.ಸಿ / ಬಿ.ಎಫ್ ನೇಮಕ ಮಾಡುವ ಬಗ್ಗೆ ಆರ್.ಬಿ.ಐ ನೊಂದಿಗೆ ಪತ್ರ ವ್ಯವಹಾರ ನೆಡೆಸಲಾಗುವುದು ಎಂದು ಬ್ಯಾಂಕಿನ ಅಧ್ಯಕ್ಷರು ಮಹಾಸಬೆಯಲ್ಲಿ ತಿಳಿಸಿದರು.

ಬ್ಯಾಂಕಿನ ವ್ಯವಸ್ಥಾಪಕಾದ ಶ್ರೀ ಕೆ.ಆರ್. ಬಸವರಾಜಪ್ಪನವರು ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲುಗೊಳಿಸಿದರು ಮತ್ತು ಬ್ಯಾಂಕಿನ ಅಧ್ಯಕ್ಷರು ಬ್ಯಾಂಕಿಗೆ ಸಂಗ್ರಹಿಸುವ ಅಧಿಕೃತ ಷೇರು ಬಂಡವಾಳ ರೂ.3 ಕೋಟಿ ಮಿತಿಯನ್ನು ನಿಗದಿಪಡಿಸುವ ಬಗ್ಗೆ ಮಹಾಸಭೆ ಅನುಮೋದನೆ ಪಡೆಯಲಾಯಿತು. ಮಂಡಳಿಯು ಬ್ಯಾಂಕಿಗೆ ಅಗತ್ಯವಿದ್ದಲ್ಲಿ ಬಾಹ್ಯ ಮೂಲಗಳಿಂದ ಪಡೆಯಬಹುದಾದ ಸಾಲಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸುವ ವಿಷಯ ಸೂಚಿಗೆ ಸರ್ಕಾರ, ಡಿ.ಸಿ.ಸಿ. ಬ್ಯಾಂಕ್ ಹಾಗೂ ಇತರೆ ಬಾಹ್ಯ ಹಣಕಾಸು ಸಂಸ್ಥೆಗಳ ಮೂಲದಿಂದ ರೂ.2 ಕೋಟಿಗಳ ಗರಿಷ್ಠ ಮಿತಿಗೊಳಪಟ್ಟು ನಮ್ಮ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಮಹಾಸಭೆಯ ಅನುಮತಿಗಾಗಿ ಮಂಡಿಸಿ ಮಹಾಸಭೆಯ ಸರ್ವಸದಸ್ಯರುಗಳು ಅಂಗೀಕಾರ ಪಡೆಯಲಾಯಿತು.

ಬ್ಯಾಂಕಿನ ಅಕೌಂಟೆಂಟ್ ಆದ ಶ್ರೀ ಎಲ್.ಗಣೇಶ್‌ರವರು 2020–21ನೇ ಸಾಲಿನ ಅಡಿಟ್ಟಾದ ಜಮಾ / ಖರ್ಚು ತಃಖ್ತೆ ಲಾಭಃ ನಷ್ಟ ಖಾತೆ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಓದಿ ಪರಿಶೀಲಿಸಿ ಅಂಗೀಕರಿಸುವುದು ಮತ್ತು 2020–21ನೇ ಸಾಲಿನ ಆಡಿಟ್ ಆಕ್ಷೇಪಣೆಗಳಿಗೆ ಮತ್ತು ಅದಕ್ಕೆ ಆಡಳಿತ ಮಂಡಳಿಯ ಸಮಜಾಯಿಷಿಗಳನ್ನು ಓದಿ ಅಂಗೀಕಾರಕ್ಕಾಗಿ ವಿಷಯ ಸೂಚಿಯನ್ನು ಮಂಡಿಸಿ ಮಹಾಸಭೆಯ ಅಂಗೀಕಾರ ಪಡೆಯಲಾಯಿತು ಬ್ಯಾಂಕಿನ ಮಾರಾಟಾಧಿಕಾರಿಗಳಾದ ಶ್ರೀ ಜಿ.ಪಿ. ಅರವಿಂದಕುಮಾರ್ ರವರು ಕಳೆದ ಸಾಲಿನ ಮಹಾ ಸಭೆ ನಡಾವಳಿಕೆ ಹಾಗೂ ಮುಂಗಡಪತ್ರವನ್ನು ಓದಿ ದಾಖಲಿಸಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ.ಹೆಚ್.ರಾಜಶೇಖರಪ್ಪ ಗಾಮ ಇವರು ಮತ್ತು ಉಳಿದಂತೆ ಶ್ರೀ ಕೆ. ಗಂಗಾಧರಪ್ಪ ಈಸೂರು ಇವರು, ಶ್ರೀ ಎನ್.ಜಿ. ಈಶ್ವರಪ್ಪಗೌಡ್ರು ನಳ್ಳಿನಕೊಪ್ಪ ಇವರು, ಶ್ರೀಮತಿ ಸುಮಾ.ಎಂ ಚಿಕ್ಕಜೋಗೀಹಳ್ಳಿ ಇವರು, ಶ್ರೀ ನಾಗರಾಜ್ ಜಿ.ಕೆ. ತೇರುಬೀದಿ ಶಿಕಾರಿಪುರ ಇವರು, ಶ್ರೀ ಕೆ.ಎಂ. ಪ್ರಕಾಶ್ ಶಾಂತಿ ನಗರ ಶಿಕಾರಿಪುರ ಇವರು, ಶ್ರೀ ಜಿ.ಪರಮೇಶ್ವರಪ್ಪ ಅಂಬೇಡ್ಕರ್ ನಗರ ಶಿಕಾರಿಪುರ, ಹಾಗೂ ಶ್ರೀ ಕೆ.ಜಿ. ಚಂದ್ರಕುಮಾರ ಇವರುಗಳು ಮಹಾಸಭೆಯ ಕಾರ್ಯಸೂಚಿಗಳನ್ನು ಮಹಾಸಭೆಯಲ್ಲಿ ಮಂಡಿಸಿ ಸರ್ವ ಸದಸ್ಯರ ಅನುಮೋದನೆ ಪಡೆದರು. ನಮ್ಮ ಬ್ಯಾಂಕಿನ ಮಾಜಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ನಿಗಮದ ಉಪಾಧ್ಯಕ್ಷರಾದ ಶ್ರೀ ಕೆ. ರೇವಣಪ್ಪನವರು ಹಾಗೂ ಶಿಕಾರಿಪುರ ತಾಲ್ಲೂಕು ಸಾಧು ವೀರಶೈವ ಸಮಾಜದ ಅಧ್ಯಕ್ಷರು ಮಾನ್ಯ ಎನ್.ಜಿ. ರಾಜಶೇಖರಪ್ಪನವರು ಈ ಮಹಾಸಭೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಉಳಿದ ಸಿಬ್ಬಂದಿಗಳಾದ ಶ್ರೀ ವೀರೇಶ್‌ಕುಮಾರ್ ಬಿ.ಜೆ., ಶ್ರೀ ಪ್ರವೀಣಕುಮಾರ್ ಎಂ.ಎಂ. ಶ್ರೀ ಅಭಿಲಾಷ ಎಂ. ಮತ್ತು ಮರುಳಸಿದ್ದ ನಿತ್ಯ ನಿಧಿ ಪಿಗ್ಮಿ ಸಂಗ್ರಹಕಾರರಾದ ಹೆಚ್.ಎಸ್. ಶಂಭುಗೌಡ ಹಾಗೂ ಹೆಚ್. ಆರ್.ಸಂತೋಷಕುಮಾರ್ ಇವರುಗಳು ಈ ಮಹಾಸಭೆಯ ಎಲ್ಲಾ ಕೆಲಸ ಕಾರ್ಯಗಳಿಗೆ ನೆರವಾದರು.

ಬ್ಯಾಂಕಿನ ಮರುಳಸಿದ್ದ ನಿತ್ಯ ನಿಧಿ ಪಿಗ್ಮಿ ಸಂಗ್ರಹಕಾರರಾದ ಶ್ರೀ ಕೋರಿ ಬಸವರಾಜ್ ಇವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ವೃತ್ತಿ ಪರ ನಿರ್ದೇಶಕರಾದ ಶ್ರೀ ಸತೀಶ್ ಹೆಚ್.ಕೆ. ಹುಲಗಿನಕೊಪ್ಪ ರವರುಗಳು ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಬಿ.ಶಿವಪ್ಪ ಈಸೂರುರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಿ. ಪರಮೇಶ್ವರಪ್ಪ ಮಳೂರು ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕನ್ನಡದ ಹಿರಿಯ ನಟ ಪ್ರೊ. ಜಿ.ಕೆ. ಗೋವಿಂದ ರಾವ್ ಹುಬ್ಬಳ್ಳಿಯ ಅವರ ಪುತ್ರಿಯ ಮನೆಯಲ್ಲಿ ನಿಧನರಾಗಿದ್ದಾರೆ.
- ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಅಕ್ಟೋಬರ್ 17 ರಂದು ಅತ್ಯಧಿಕ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.
- ಹೈದರಾಬಾದ್ ಮೂಲದ ಬಯೋಲಾಜಿಕಲ್ ಸಂಸ್ಥೆಯ ಕೊವಿಡ್–19 ಲಸಿಕೆ ನವೆಂಬರ್ ತಿಂಗಳಾಂತ್ಯದ ವೇಳೆಗೆ ಸಲ್ಲಿಸುವ ಸಾಧ್ಯತೆಯಿದೆ ಎಂದು ಅಧಿಕೃತ ಮೂಲಗಳಿಂದ ತಿಳಿದು ಬಂದಿದೆ.
- ಭಾರತೀಯ ಅಮೆರಿಕನ್ ರವಿ ಚೌಧರಿ ಅವರನ್ನು ಅಮೆರಿಕ ಸರ್ಕಾರದ ರಕ್ಷಣಾ ಇಲಾಖೆಯಲ್ಲಿ ಪ್ರಮುಖ ಹುದ್ದೆಗೆ ನಾಮನಿರ್ದೇಶನ ಮಾಡಿರುವುದಾಗಿ ಅಧ್ಯಕ್ಷ ಜೋ ಬೈಡನ್ ಅವರು ಘೋಷಿಸಿದ್ದಾರೆ.
- ಅಕ್ಟೋಬರ್ 20 ರಿಂದ 25ರವರೆಗೆ ಬಂಡೀಪುರ ಹುಲಿ ಮೀಸಲು ಅರಣ್ಯದಲ್ಲಿ ಹುಲಿಗಳ ಗಣತಿಯನ್ನು ಕ್ಯಾಮರಾ ಟ್ರ್ಯಾಪ್ ಮೂಲಕ ಆರಂಭಿಸಲು ಸಿಬ್ಬಂದಿ ಸಜ್ಜಾಗಿದ್ದಾರೆ.
- ಭಾರತದಾದ್ಯಂತ ತೈಲೋತ್ಪನ್ನಗಳ ಬೆಲೆ ಏರಿಕೆ ಎಂದಿನಂತೆ ಮುಂದುವರೆದಿದ್ದು, ಬೆಂಗಳೂರಿನಲ್ಲಿ ಪ್ರತೀ ಲೀಟರ್ ಪೆಟ್ರೋಲ್ ದರ 108.76ಕ್ಕೆ ಏರಿಕೆಯಾಗಿದ್ದು, ಪ್ರತೀ ಲೀಟರ್ ಡೀಸೆಲ್ ದರ 99.59ರೂ.ಗೆ ಏರಿಕೆಯಾಗಿದೆ.
- ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಕೇಂದ್ರ ಬಿಂದು ಜಂಬೂ ಸವಾರಿ ಮೆರವಣಿಗೆಯಲ್ಲಿ ಚಿನ್ನದ ಅಂಬಾರಿಯಲ್ಲಿ ವಿರಾಜಮಾನವಾಗಿ ಸಾಗುವ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಇದೇ ಮೊದಲ ಬಾರಿಗೆ ಚಾಮುಂಡಿ ಬೆಟ್ಟದಿಂದ ಅಲಂಕೃತ ವಾಹನದಲ್ಲಿ ವಿವಿಧ ಕಲಾತಂಡಗಳ ಜೊತೆಗೆ ಮೆರವಣಿಗೆ ಮೂಲಕ ಅರಮನೆಗೆ ತರಲಾಯಿತು.
- ಭಾರತೀಯ ವಾಯುಪಡೆಯ ಯುದ್ಧ ವಿಮಾನಗಳನ್ನು ಶತ್ರುಗಳಿಂದ ರಕ್ಷಿಸುವುದಕ್ಕಾಗಿ ರಡಾರ್ ನಿರ್ದೇಶಿತ ಕ್ಷಿಪಣಿಗಳನ್ನು ದಾರಿತಪ್ಪಿಸುವ ಸಾಮರ್ಥ್ಯ ಹೊಂದಿರುವ ಚಾಫ್ ತಂತ್ರಜ್ಞಾನವನ್ನು ಡಿಆರ್‌ಡಿಒ ಅಭಿವೃದ್ಧಿಪಡಿಸಿದೆ.

## ಓದುಗರ ಅನಿಸಿಕೆ...



**ಯಥಾಸ್ಥಿತಿ ಕಾಪಾಡುವುದು ಅನಿವಾರ್ಯ :** ಪ್ರಸ್ತುತ ಕಳೆದೊಂದು ತಿಂಗಳಿನಿಂದ ದೇಶದ ಆರ್ಥಿಕತೆ ಪುನಶ್ಚೇತನ ಕಂಡುಬರುತ್ತಿದ್ದರೂ ಕೂಡ ಸತತ ಎಂಟನೇ ಬಾರಿಗೂ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಬದಲಾಯಿಸದೆ ಶೇ.4ರ ಯಥಾಸ್ಥಿತಿ ಮುಂದುವರಿಸಿರುವುದು ಸೂಕ್ತವಾಗಿದೆ. ಸದ್ಯದ ದೇಶದ ಆರ್ಥಿಕತೆಯು ಸಂಪೂರ್ಣ ಪುನಶ್ಚೇತನಗೊಳ್ಳಬೇಕಿದ್ದರೆ, ಹಣದುಬ್ಬರವನ್ನು ನಿಶ್ಚಿತ ಗುರಿಯೊಳಗೆ ಇರಿಸುವುದು ಮತ್ತು ಯಥಾಸ್ಥಿತಿ ಕಾಪಾಡುವುದು ಅನಿವಾರ್ಯ ಎನ್ನುವುದು ಅರ್ಥಿಕ ತಜ್ಞರ ಅಭಿಪ್ರಾಯವಾಗಿದೆ.

**▸▸ ಕಿರಣ್ ಕುಮಾರ್, ತುಮಕೂರು**

**ಆರ್ಥಿಕ ತಜ್ಞರುಗಳ ರಾಜೀನಾಮೆ :** ಕೇಂದ್ರ ಸರಕಾರದ ಮುಖ್ಯ ಆರ್ಥಿಕ ಸಲಹೆಗಾರ ಕೆ.ವಿ. ಸುಬ್ರಮಣಿಯನ್ ಅವರು ತಮ್ಮ ಅಧಿಕಾರಾವಧಿ ಪೂರ್ಣಗೊಳ್ಳಲು ಎರಡು ತಿಂಗಳು ಇರುವಾಗಲೇ ರಾಜೀನಾಮೆ ಸಲ್ಲಿಸಿದ್ದಾರೆ. ಕಳೆದ ಆರೇಳು ವರ್ಷಗಳಿಂದ ಕೇಂದ್ರ ಸರ್ಕಾರದ ಪ್ರಮುಖ ಆರ್ಥಿಕ ತಜ್ಞರುಗಳು ತಮ್ಮ ಅವಧಿಗೂ ಮುನ್ನವೇ ರಾಜೀನಾಮೆ ನೀಡಿ ಹೊರ ನಡೆಯುತ್ತಿದ್ದಾರೆ ಮತ್ತು ಯಾರೂ ತಮ್ಮ ನಿರ್ಗಮನಕ್ಕೆ ಕಾರಣ ತಿಳಿಸುತ್ತಿಲ್ಲ.

**▸▸ ಬಿ.ಚನ್ನಬಸಯ್ಯಸ್ವಾಮಿ, ಹೊಸಪೇಟೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.